ರಂಜಿಸುವುದು ಮಕ್ಕಳ ಸಾಹಿತ್ಯದ ಪ್ರಮುಖ ಉದ್ದೇಶವಾದರೂ, ರಂಜನೆಯ ಜೊತೆಜೊತೆಗೆ ಓದಿನ ರುಚಿಯನ್ನು ಹತ್ತಿಸುವುದು ಹಾಗೂ ಭಾಷೆಯ ಸಾಧ್ಯತೆಗಳನ್ನು ಮನದಟ್ಟು ಮಾಡಿಸುವುದು ಎಲ್ಲ ಒಳ್ಳೆಯ ಕೃತಿಗಳ ಲಕ್ಷಣವಾಗಿರುತ್ತದೆ. ಭಾಷೆಯ ಮೂಲಕ ಮಕ್ಕಳ ಕಲ್ಪನಾಶಕ್ತಿಯನ್ನು ಉದ್ದೀಪಿಸುವುದು ಕೂಡ ಎಳೆಯರ ಸಾಹಿತ್ಯದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಉಡುಪರ ಕೃತಿಗಳು ಮಾದರಿಯಂತಿವೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಸಿದ್ಧಸೂತ್ರಗಳಲ್ಲಿ ಗಿರಕಿ ಹೊಡೆಯುತ್ತಿರುವ ಸಂದರ್ಭದಲ್ಲಿ, ಉಡುಪರ ಕೃತಿಗಳ ಓದು, ಮರು ಓದು ಚೇತೋಹಾರಿಯಾದುದು.

ಉಡುಪರಂತೆಯೇ ನಿರ್ವ್ಯಾಜ ಪ್ರೇಮದಿಂದ ಮಕ್ಕಳ ಸಾಹಿತ್ಯದಲ್ಲಿ ತೊಡಗಿಕೊಂಡಿರುವ ಆನಂದ ಪಾಟೀಲರು 'ಅಪರೂಪದ ಮಕ್ಕಳ ಕವಿ ಎನ್. ಶ್ರೀನಿವಾಸ ಉಡುಪ' ಕೃತಿಯನ್ನು ರೂಪಿಸಿರುವುದು ಅರ್ಥಪೂರ್ಣವಾಗಿದೆ. ಕನ್ನಡದ ಮಕ್ಕಳ ಸಾಹಿತ್ಯ ಮರೆಯಬಾರದ ಕವಿ-ಕಥೆಗಾರನನ್ನು ಪುಸ್ತಕದ ರೂಪದಲ್ಲಿ ನೆನಪಿಸಿಕೊಳ್ಳುವ ಕೆಲಸ ಮಾಡಿರುವ ಕಾರಣಕ್ಕಾಗಿ ಪಾಟೀಲರಿಗೂ, 'ಅಭಿನವ' ಬಳಗಕ್ಕೂ ಅಭಿನಂದನೆಗಳು ಸಲ್ಲಬೇಕು.


**ಲೇ: ಆನಂದ ಪಾಟೀಲ; ಪು: 90; ಬೆ: ₹ 100; ಪ್ರ: ಅಭಿನವ, ಬೆಂಗಳೂರು. ಫೋನ್: 9448804905**

# ಮತ್ತೆ ಅವತರಿಸಿದ ದೈತ್ಯರು

ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ-ಕುತೂಹಲವನ್ನು ಬೆಳೆಸುವ ಉದ್ದೇಶದ ಕೃತಿ 'ಮತ್ತೆ ಅವತರಿಸಿದ ದೈತ್ಯರು.' ಮಕ್ಕಳ ಸಾಹಿತ್ಯದಲ್ಲಿ ಸಾಕಷ್ಟು ಕೆಲಸ ಮಾಡಿರುವ ಜಂಬುನಾಥ ಕಂಚ್ಯಾಣಿ ಅವರ ಈ ಕಾದಂಬರಿ, ರಂಜನೀಯ ಕಲ್ಪನೆಯ ಕಥೆಯಿಂದ ಎಳೆಯ ಓದುಗರಿಗೆ ಇಷ್ಟವಾಗಬಲ್ಲದು.

ಕಾಲಗರ್ಭದಲ್ಲಿ ಸೇರಿಹೋಗಿರುವ ಡೈನೋಸಾರ್‌ಗಳು ವರ್ತಮಾನದಲ್ಲಿ ಅವತರಿಸಿದರೆ ಏನಾಗುತ್ತದೆ? ಈ ಪ್ರಶ್ನೆಗೆ ಉತ್ತರದ ರೂಪದಲ್ಲಿ 'ಜುರಾಸಿಕ್ ಪಾರ್ಕ್'ನಂತಹ ಸಿನಿಮಾಗಳನ್ನು ನೋಡಬಹುದು. ಜಂಬುನಾಥರ ಕಾದಂಬರಿಯಲ್ಲೂ ಡೈನೋಸಾರ್‌ಗಳು ಜನಿಸುತ್ತವೆ. ಆದರೆ, ಇವುಗಳಿಂದ ವಿಧ್ವಂಸಕ ಕೃತ್ಯಗಳೇನೂ ನಡೆಯುವುದಿಲ್ಲ. ಈ ದೈತ್ಯಜೀವಿಗಳ ಇರುವು ಕುತೂಹಲಿಗಳ ಕಣ್ಣಕೇಂದ್ರವಾಗಿ ಪ್ರಸಕ್ತ ಕೃತಿಯಲ್ಲಿ ನಿರೂಪಣೆಗೊಂಡಿದೆ.

ಹಿಮಗರ್ಭದಲ್ಲಿ ಹೂತುಹೋಗಿದ್ದ ಡೈನೋಸಾರ್‌ಗಳ ಮೊಟ್ಟೆಗಳು ಮಕ್ಕಳಿಗೆ ದೊರೆತು, ಪ್ರಯೋಗಾಲಯದಲ್ಲಿ ಅವುಗಳಿಂದ ಹಿಮ್ಮಿಸಾರ್‌ಗಳು ಜನಿಸುತ್ತವೆ. ಈ ಹಿಮ್ಮಿಸಾರ್‌ಗಳ ಮೂಲಕ ಮಕ್ಕಳು ಎಳೆಯ ವಿಜ್ಞಾನಿಗಳ ರೂಪದಲ್ಲಿ ದೇಶದ




ಗಮನಸೆಳೆಯುತ್ತಾರೆ. ಈ ರಮ್ಯ ಕಥನಕ್ಕೆ ಪೂರಕವಾಗಿ, ವಿಜ್ಞಾನ ತರಗತಿಗಳ ಆವರಣವನ್ನು ಕಥೆಗಾರರು ಬಳಸಿಕೊಂಡಿದ್ದಾರೆ. ವಿಜ್ಞಾನದ ಮೇಷ್ಟ್ರ ಪಾಠಗಳಲ್ಲಿ ವಿಕಾಸವಾದದ ಮಾಹಿತಿ ಸೇರಿಕೊಂಡಿದೆ.

**ಲೇ: ಜಂಬುನಾಥ ಕಂಚ್ಯಾಣಿ; ಪು: 104; ಬೆ: ₹ 125; ಪ್ರ: ಮಾನ್ಯತಾ ಸಾಹಿತ್ಯ ಪ್ರಕಾಶನ, ವಿಜಯಪುರ. ಫೋನ್: 9901111734.**